ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 26 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 09.12.2024 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ಹೊಸ ಬಿಪಿಎಲ್ ಪಡಿತರ ಚೀಟಿ ಪಡೆಯಲು ಹಾಗೂ ತಿದ್ದುಪಡಿ ಮಾಡಲು ಸರ್ವರ್ ಸಮಸ್ಯೆಯನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;</td><td>ಪ್ರಸ್ತುತ ಆಹಾರ ಇಲಾಖೆಯಲ್ಲಿ ಬಳಸಲಾಗುತ್ತಿರುವ ಸರ್ವರ್ ಹಳೆಯದಾಗಿದ್ದು, ಈ ಕಾರಣದಿಂದಾಗಿ ಎನ್.ಐ.ಸಿ ಯಿಂದ ಕೆ.ಎಸ್.ಡಿ.ಸಿ (Karnataka State Data Centre) ಗೆ ಆಹಾರ ತಂತ್ರಾಂಶದ Migration ಕಾರ್ಯವು ಅಂತಿಮ ಹಂತದಲ್ಲಿದ್ದು, ಎನ್.ಐ.ಸಿ ಯಿಂದ ಕೆ.ಎಸ್.ಡಿ.ಸಿ 'ಗೆ Migration ಕಾರ್ಯ ಪೂರ್ಣಗೊಂಡ ನಂತರ ಆದ್ಯತಾ ಪಡಿತರ ಚೀಟಿ ನೀಡುವ ಕಾರ್ಯ/ ಪಡಿತರ ಚೀಟಿ ತಿದ್ದುಪಡಿ ಮಾಡುವ ಪ್ರಕ್ರಿಯೆ ನಿರಂತರವಾಗಿರುತ್ತದೆ.</td></tr>
<tr><td>ಆ</td><td>ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ರದ್ದಾದ ಬಿಪಿಎಲ್ ಕಾರ್ಡ್‌ಗಳು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)</td><td>ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ 3,41,779 ಪಡಿತರ ಚೀಟಿಗಳನ್ನು ರದ್ದತಿ/ಅಮಾನತ್ತು/ಆದ್ಯತೇತರ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಲಾಗಿರುತ್ತದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.</td></tr>
<tr><td>ಇ</td><td>ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ನ್ಯಾಯ ಬೆಲೆ ಅಂಗಡಿಯ ಮೂಲಕ ಯಾವ ಯಾವ ವಸ್ತುಗಳನ್ನು ವಿತರಿಸಲಾಗುತ್ತಿದೆ; (ವಸ್ತುವಾರು ವಿವರ ನೀಡುವುದು)</td><td>ಪಡಿತರ ಚೀಟಿಗಳಿಗೆ ಉಚಿತವಾಗಿ ಈ ಕೆಳಕಂಡ ಆಹಾರಧಾನ್ಯವನ್ನು ವಿತರಿಸಲಾಗುತ್ತಿದೆ.
<table>
<tr><th>ಪಡಿತರ ಚೀಟಿ ವಿಧ</th><th>ಪ್ರಮಾಣ</th></tr>
<tr><td>ಅಂತ್ಯೋದಯ ಅನ್ನಯೋಜನೆ (AAY)</td><td>ಪ್ರತಿ ಪಡಿತರ ಚೀಟಿಗೆ 35 ಕೆ.ಜಿ ಆಹಾರ ಧಾನ್ಯಗಳನ್ನು ವಿತರಣೆ ಮಾಡಲಾಗುತ್ತಿದ್ದು, ಪ್ರಸ್ತುತ 21 ಕೆ.ಜಿ ಅಕ್ಕಿ ಮತ್ತು ಪ್ರಾದೇಶಿಕ ಆಹಾರ ಪದ್ಧತಿಗನುಗುಣವಾಗಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಿದ 14 ಕೆ.ಜಿ ರಾಗಿ/ ಜೋಳವನ್ನು ಹಂಚಿಕೆ ಮಾಡಲಾಗುತ್ತಿದೆ.</td></tr>
</table></td></tr>
</table>

| | |
|---|---|
| ಆದ್ಯತಾ ಕುಟುಂಬ (PHH) | ಪ್ರತಿ ಸದಸ್ಯರಿಗೆ 5 ಕೆ.ಜಿಯಂತೆ ಆಹಾರಧಾನ್ಯಗಳನ್ನು ವಿತರಣೆ ಮಾಡಲಾಗುತ್ತಿದ್ದು, ಪ್ರಸ್ತುತ 3 ಕೆ.ಜಿ ಅಕ್ಕಿ ಮತ್ತು ಪ್ರಾದೇಶಿಕ ಆಹಾರ ಪದ್ಧತಿಗನುಗುಣವಾಗಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಿದ 02 ಕೆ.ಜಿ ರಾಗಿ/ ಜೋಳವನ್ನು ಹಂಚಿಕೆ ಮಾಡಲಾಗುತ್ತಿದೆ. |

| | | |
|---|---|---|
| ಈ | ರಾಜ್ಯದಲ್ಲಿ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಹೊರ ರಾಜ್ಯಗಳಿಗೆ ಸಾಗಿಸುವ ಪ್ರಕರಣಗಳು ದಾಖಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ? (ಮಾಹಿತಿ ನೀಡುವುದು) | ಬಂದಿರುತ್ತದೆ.<br>ಅಕ್ರಮ ಅಕ್ಕಿ ಸಾಗಾಣಿಕೆ ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ :-<br>• ಸಾರ್ವಜನಿಕ ವಿತರಣಾ ಪದ್ಧತಿಯಡಿ ವಿತರಿಸಲಾಗುವ ಪಡಿತರವನ್ನು ಭಾರತ ಆಹಾರ ನಿಗಮದಿಂದ ಮತ್ತು ಸಗಟು ಮಳಿಗೆಯಿಂದ ನ್ಯಾಯಬೆಲೆ ಅಂಗಡಿಗಳಿಗೆ ಸರಬರಾಜು ಮಾಡಲು ಸಗಟು ಹಾಗೂ ಚಿಲ್ಲರೆ ಸಾಗಾಣಿಕೆ ಗುತ್ತಿಗೆದಾರರನ್ನು ನಿಯೋಜಿಸಲಾಗಿರುತ್ತದೆ.<br>• ಸಗಟು ಮಳಿಗೆಗಳಿಂದ ನ್ಯಾಯಬೆಲೆ ಅಂಗಡಿ ಗಳಿಗೆ ಸರಬರಾಜು ಮಾಡಲು ರೂಟ್ ಮ್ಯಾಪ್ ಅನ್ನು ನೀಡುವ ಪದ್ಧತಿ ಚಾಲ್ತಿಯಲ್ಲಿರುತ್ತದೆ.<br>• ಸಗಟು ಮಳಿಗೆ ಮತ್ತು ನ್ಯಾಯಬೆಲೆ ಅಂಗಡಿ ಗಳಿಗೆ ಪಡಿತರ ಎತ್ತುವ ಳಿ ಮತ್ತು ವಿತರಣೆ ಸಮಯದಲ್ಲಿ ಆಹಾರ ನಿರೀಕ್ಷಕರು ಕಡ್ಡಾಯವಾಗಿ ಹಾಜರಿರಬೇಕೆಂದು ಮತ್ತು ಜಿಲ್ಲೆಯ ಜಂಟಿ/ಉಪ ನಿರ್ದೇಶಕರುಗಳು ಮೇಲ್ವಿಚಾರಣೆ ವಹಿಸುವಂತೆ ಕಡ್ಡಾಯ ಸೂಚನೆಗಳನ್ನು ನೀಡಿ ಪ್ರತಿ ಮಾಹೆಗೆ ಗುರಿ ನಿಗಧಿಪಡಿಸಲಾಗಿರುತ್ತದೆ.<br>• ಸಗಟು ಮಳಿಗೆಗಳಿಗೆ ಪೂರ್ಣ ಪ್ರಮಾಣದ ಪಡಿತರ ಸ್ವೀಕರಿಸಿರುವ ಬಗ್ಗೆ ಜಿಲ್ಲಾ ವ್ಯವಸ್ಥಾಪಕರು ಮತ್ತು ಸಗಟು ಮಳಿಗೆ ವ್ಯವಸ್ಥಾಪಕರು, ಆಹಾರ ನಿರೀಕ್ಷಕರುಗಳು ದೃಡೀಕರಿಸಿದ ನಂತರವೇ ಸಹಾಯಧನ ಮೊತ್ತವನ್ನು ಪಾವತಿಸಲು ಕ್ರಮವಹಿಸ ಲಾಗುತ್ತಿದೆ.<br>ರಾಜ್ಯಮಟ್ಟದಲ್ಲಿ ಜಾಗೃತಿದಳವನ್ನು ಸೃಜಿಸಲಾಗಿದ್ದು, ಸದರಿ ಜಾಗೃತಿದಳದ ವತಿಯಿಂದಲೂ ಸಹ ಅನಿರೀಕ್ಷಿತ ತನಿಖೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. |

ಆನಾಸ **346** ಡಿಆರ್ಎ **2024**

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ
ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ
ಇಲಾಖಾ ಸಚಿವರು

LCQ-26

ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) ವಿಧಾನ ಪರಿಷತ್ತಿನ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:26

ಅನುಬಂಧ -1

30-01-2021 ರಿಂದ 31-05-2024 ರವರೆಗೆ ಅನರ್ಹತೆಯೆಂದು ಪರಿವರ್ತಿಸಿದ/ ರದ್ದುಪಡಿಸಿದ ಒಟ್ಟು ಆದ್ಯತಾ ಪಡಿತರ ಚೀಟಿಗಳ ವಿವರ

| ಕ್ರ. ಸಂ | ಜಿಲ್ಲೆ | ಒಟ್ಟು ಪಡಿತರ ಚೀಟಿಗಳ ಸಂಖ್ಯೆ |
|---|---|---|
| 1 | 2 | 19 |
| 1 | ಬಾಗಲಕೋಟೆ | 13,210 |
| 2 | ಬಳ್ಳಾರಿ | 16,864 |
| 3 | ಬೆಂಗಳೂರು ಪೂರ್ವ | 3,421 |
| 4 | ಬೆಂಗಳೂರು ಉತ್ತರ | 7,520 |
| 5 | ಬೆಂಗಳೂರು ದಕ್ಷಿಣ | 4,399 |
| 6 | ಬೆಂಗಳೂರು ಪಶ್ಚಿಮ | 6,028 |
| 7 | ಬೆಳಗಾವಿ | 18,541 |
| 8 | ಬೆಂಗಳೂರು | 19,413 |
| 9 | ಬೆಂಗಳೂರು ಗ್ರಾಮಾಂತರ | 6,842 |
| 10 | ಬೀದರ್ | 12,113 |
| 11 | ಚಾಮರಾಜನಗರ | 3,282 |
| 12 | ಚಿಕ್ಕಬಳ್ಳಾಪುರ | 6,149 |
| 13 | ಚಿಕ್ಕಮಗಳೂರು | 9,042 |
| 14 | ಚಿತ್ರದುರ್ಗ | 16,618 |
| 15 | ದಕ್ಷಿಣ ಕನ್ನಡ | 4,570 |
| 16 | ದಾವಣಗೆರೆ | 11,227 |
| 17 | ಧಾರವಾಡ | 8,030 |
| 18 | ಗದಗ | 3,635 |
| 19 | ಹಾಸನ | 8,452 |
| 20 | ಹಾವೇರಿ | 8,664 |
| 21 | ಕಲಬುರಗಿ | 19,059 |
| 22 | ಕೊಡಗು | 4,940 |
| 23 | ಕೋಲಾರ | 6,956 |
| 24 | ಕೊಪ್ಪಳ | 11,102 |
| 25 | ಮಂಡ್ಯ | 7,983 |
| 26 | ಮೈಸೂರು | 12,135 |
| 27 | ರಾಯಚೂರು | 16,731 |
| 28 | ರಾಮನಗರ | 7,324 |
| 29 | ಶಿವಮೊಗ್ಗ | 11,771 |
| 30 | ತುಮಕೂರು | 12,477 |
| 31 | ಉಡುಪಿ | 3,916 |
| 32 | ಉತ್ತರ ಕನ್ನಡ | 4,402 |
| 33 | ವಿಜಯನಗರ | 0 |
| 34 | ವಿಜಯಾಪುರ | 28,747 |
| 35 | ಯಾದಗಿರಿ | 6,216 |
| | **ಒಟ್ಟು** | **3,41,779** |

3/12/24

ಅಪರ ನಿರ್ದೇಶಕರು (ಐಟಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ